ಬಂದು ಕೂರುವುದಕ್ಕೆ ಮಾತ್ರ ಅವಳ ಪಾತ್ರ ಸೀಮಿತವಾಗಿತ್ತು. ಅವಳನ್ನು ಸಂಜೆ ಮನೆಗೆ ನಾನೇ ತಲುಪಿಸಿ ಅಲ್ಲೇ ಊಟ ಮಾಡಿಕೊಂಡು ಹೋಗುತ್ತಿದ್ದೆ. ಅದೇ ನಿತ್ಯದ ಪರಿಪಾಠ. ನಿತ್ಯವು ಹೋದ ತಕ್ಷಣ ನಂದನಾ ಆಯಾಸವೆಂದು ತನ್ನ ರೂಮಿಗೆ ಹೋಗಿ ಮಲಗಿಬಿಡುತ್ತಿದ್ದಳು. ಅರ್ಧಗಂಟೆಯ ಮೇಲೆ ಎದ್ದುಬರುತ್ತಿದ್ದಳು. ನಾನಾಗ ಅಪೇಕ್ಷಿಸುತ್ತಿದ್ದ ಸ್ಟ್ರಾಂಗ್ ಕಾಫಿ ತಯಾರಿಸಿ ತಂದುಕೊಟ್ಟು 'ಬಿಸಿ ಸಾಕಾ', 'ಸಕ್ಕರೆ ಸಾಕಾ' ಅಂತ ಅನುನಯಿಸುತ್ತಾ ಹೇಮಾ ಎದುರು ನಿಲ್ಲುತ್ತಿದ್ದಳು. ಕಾಫಿ ಅಪಾಯ್ಯಮಾನವೋ ಅಥವಾ...

ರಾತ್ರಿ ಊಟ ಬಡಿಸುವಾಗಲೂ ಹೇಮಾ ಎಚ್ಚರಿಕೆ ವಹಿಸುತ್ತಿದ್ದಳು. ಅವರ ಮನೆಯ ಚಿಕನ್, ಮಟನ್, ಮೀನುಗಳ ಅಡಿಗೆ ಬೆರೆಯದಂತೆ ಪ್ರತ್ಯೇಕ ಶಾಕಾಹಾರಿ ಅಡಿಗೆ ನನಗಾಗಿ ತಾನೇ ಮುತುವರ್ಜಿವಹಿಸಿ ಮಾಡಿಸುತ್ತಿದ್ದಳು. ಕೆಲಬಾರಿ ತಾನೇ ಮಾಡಿಬಿಡುತಿದ್ದಳು. ಒಂದು ದಿನ ನನ್ನ ಶರ್ಟ್‌ನ ಕಾಲರ್ ನೋಡಿ, 'ಬಟ್ಟೆ ಯಾರು ಒಗೆಯೋದು?' ಅಂದಳು. 'ನಾನೇ, ಯಾಕೆ?' ಅಂದಾಗ,

